

# ಸೌದಿಯ ಸರ್ವಾಧಿಕಾರಿ

ಪ್ರವೀಣ ಕುಲಕರ್ಣಿ

ಮೊಹಮ್ಮದ್ ಬಿನ್ ಸಲ್ಮಾನ್ ಅಲ್ ಸೌದ್– ಸಂಕ್ಷಿಪ್ತದಲ್ಲಿ ಎಂಬಿಎಸ್– ಅವರ ಹೆಸರು ಪ್ರಾಯಶಃ ಈಗ ಜಗತ್ತಿನಲ್ಲೇ ಚಿರಪರಿಚಿತ. ಏಕೆಂದರೆ, ಸೌದಿ ಅರೇಬಿಯಾದ ಈ ಯುವರಾಜನ ವರ್ಣರಂಜಿತ ವ್ಯಕ್ತಿತ್ವವೇ ಅಂತಹದ್ದು. ದೇಶದ ಪ್ರಧಾನ ಮಂತ್ರಿಯಾಗಿ ಮೊನ್ನೆ ಮೊನ್ನೆಯಷ್ಟೇ ಅಧಿಕಾರ ಸ್ವೀಕರಿಸಿರುವ ಈ ರಾಜಕುಮಾರ, ತಂದೆ ರಾಜನಾದ ದಿನದಿಂದಲೂ ತಾವೇ ಅಧಿಕಾರ ಚಲಾಯಿಸುತ್ತ ಬಂದವರು. ಜಗತ್ತಿನ ಅತಿದೊಡ್ಡ ತೈಲ ರಫ್ತು ದೇಶ ಎನಿಸಿದ ಸೌದಿ ಅರೇಬಿಯಾದ ಪ್ರಶ್ನಾತೀತ ನಾಯಕನಾಗಿ ಅವರು ಬೆಳೆದ ಹಾದಿ ಬೆರಗು ಮೂಡಿಸುವಂಥದ್ದು. ಮಾತ್ರವಲ್ಲ, ಆ ದೇಶದ ಜನರ ಪಾಲಿಗೆ ನಡುಕ ಹುಟ್ಟಿಸುವಂಥದ್ದೂ ಹೌದು.

ಮಹಿಳೆಯರು ವಾಹನ ಚಾಲನೆ ಮಾಡದಂತೆ ವಿಧಿಸಲಾಗಿದ್ದ ನಿರ್ಬಂಧವನ್ನು ತೆಗೆದುಹಾಕಿದ್ದು ಇದೇ ರಾಜಕುಮಾರ. ಹಲವು ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ಸೌದಿ ಅರೇಬಿಯಾದ ಅಭಿವೃದ್ಧಿಯ ಬಂಡಿಗೆ ವೇಗವರ್ಧಕ ಶಕ್ತಿ ಲಸಿಕೆಯನ್ನು ಕೊಟ್ಟವರು ಕೂಡ ಇವರಾಗಿದ್ದಾರೆ. ‘ವಿಷನ್ 2030’ ಅವರ ಮಹತ್ವದ ಕನಸಿನ ಯೋಜನೆಯಾಗಿದೆ. ತೈಲೋತ್ಪನ್ನೇತರ ಉದ್ಯಮಗಳಿಗೆ ಹೆಚ್ಚಿನ ಉತ್ತೇಜನ ನೀಡುವ ಗುರಿಯನ್ನೂ ಈ ಯುವರಾಜ ಹಾಕಿಕೊಂಡಿದ್ದಾರೆ.

ಪಠ್ಯಕ್ರಮವನ್ನು ಬದಲಾಯಿಸುವುದು, ಶಿಕ್ಷಣ ಕ್ಷೇತ್ರದಲ್ಲಿ ಭಾರಿ ಪ್ರಮಾಣದ ಸುಧಾರಣೆ ತರುವುದು, ಉದ್ಯೋಗದಲ್ಲಿ ಮಹಿಳೆಯರಿಗೂ ಅವಕಾಶ ಕಲ್ಪಿಸುವುದು, ಮನರಂಜನಾ ಕ್ಷೇತ್ರದ ಬೆಳವಣಿಗೆಗೆ ಅವಕಾಶ ಮಾಡಿಕೊಡುವುದು, ಧಾರ್ಮಿಕ ಪೊಲೀಸರ ಅಧಿಕಾರವನ್ನು ಮೊಟಕುಗೊಳಿಸುವುದು ಮೊದಲಾದ ಸುಧಾರಣಾ ಕ್ರಮಗಳು ಅದರಲ್ಲಿ ಸೇರಿವೆ. ಸಾರ್ವಜನಿಕವಾಗಿ ಮಹಿಳಾ ಸಂಗೀತ ಕಛೇರಿಗೆ ಅವಕಾಶ ಮಾಡಿಕೊಟ್ಟ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಮಹಿಳೆಯರಿಗೆ ಕ್ರೀಡಾ ಬಾಗಿಲನ್ನೂ ತೆರೆದ ಯುವರಾಜ ಇವರಾಗಿದ್ದಾರೆ. ಇಸ್ಲಾಂನ ಮೂಲತತ್ವಗಳಿಗೆ ಅಂಟಿಕೊಂಡೇ ದೇಶವನ್ನು ಆಧುನೀಕರಣದತ್ತ ಕೊಂಡೊಯ್ಯುವ ಗುರಿ ಅವರದಾಗಿದೆ. ಭ್ರಷ್ಟಾಚಾರದ ಕಡು ವಿರೋಧಿಯಾದ ಈ ಯುವರಾಜನ ಕೈಗೆ ತಪ್ಪಿತಸ್ಥರು ಸಿಕ್ಕುಬಿದ್ದರೆ ತಲೆದಂಡವೇ ಶಿಕ್ಷೆಯಂತೆ.

ಮೂಲಭೂತವಾದದ ಬಿಗಿಹಿಡಿತದಿಂದ ದೇಶವನ್ನು ಪಾರುಮಾಡುವ ಕ್ರಮಗಳಿಂದ ವಿಶ್ವ ನಾಯಕರಿಂದ ಮೆಚ್ಚುಗೆಗೆ ಪಾತ್ರರಾದ ಈ ಯುವರಾಜ, ಅದೇ ಕಾಲಕ್ಕೆ ದೇಶದಲ್ಲಿ ಆಗುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯ ಕಾರಣಕ್ಕಾಗಿ, ನೆರೆಹೊರೆಯ ದೇಶಗಳ ಜತೆ ಕಾಲು ಕೆದರಿ ಯುದ್ಧ ಸಾರುತ್ತಿರುವ ಕಾರಣಕ್ಕಾಗಿ, ಭಿನ್ನಧ್ವನಿಗಳನ್ನು ಇಲ್ಲವಾಗಿಸುತ್ತಿರುವ ಕಾರಣಕ್ಕಾಗಿ ಕುಖ್ಯಾತಿಯನ್ನೂ ಗಳಿಸಿದ್ದಾರೆ. ಯೆಮನ್‌ನಲ್ಲಿ ಹೋಥಿ ದಂಗೆಗೆ ಕಾರಣವಾದ ಆರೋಪವೂ ಈ ಯುವರಾಜನ ಮೇಲಿದೆ. ಆ ದಂಗೆ ಲಕ್ಷಕ್ಕೂ ಅಧಿಕ ಜನರ ಸಾವಿಗೆ ಕಾರಣವಾಗಿತ್ತು. ಸೌದಿ ನೇತೃತ್ವದ ವಾಯು ದಾಳಿಯಲ್ಲಿ ನಾಗರಿಕರು ಸಾವನ್ನಪ್ಪಿದ್ದರು. ಯೆಮನ್ ಹಿಂದೆಂದೂ ಕಂಡರಿಯದಂತಹ ಕ್ಷಾಮವನ್ನೂ ಅನುಭವಿಸಿತ್ತು.

ಸೌದಿ ಸರ್ಕಾರದ ನೀತಿ ನಿಲುವುಗಳನ್ನು ಬಲವಾಗಿ ವಿರೋಧಿಸಿದವರು ಪತ್ರಕರ್ತ ಜಮಾಲ್ ಖಸೋಗಿ. ಸೌದಿ ಸರ್ಕಾರದ ಏಜೆಂಟ್‌ಗಳು ಅವರನ್ನು ಇಸ್ತಾಂಬುಲ್‌ನ ರಾಯಭಾರಿ ಕಚೇರಿಯಲ್ಲಿ ಕೊಂದು ಹಾಕಿದ್ದರು. ಈ ಪ್ರಕರಣದಲ್ಲಿ ನನ್ನದೇನೂ ಪಾತ್ರವಿಲ್ಲ ಎಂದು ಸೌದಿ ರಾಜಕುಮಾರ ಪದೇ ಪದೇ ಸ್ಪಷ್ಟನೆ ಕೊಟ್ಟರಾದರೂ ಜಗತ್ತು ಅವರ ಕೈಗಳಲ್ಲಿ ರಕ್ತದ ಕಲೆಗಳನ್ನು ಕಂಡಿತ್ತು. 20ಕ್ಕೂ ಅಧಿಕ ಬುದ್ಧಿಜೀವಿಗಳನ್ನು, ಅವರು ಸರ್ಕಾರದ ಟೀಕಾಕಾರರು ಎನ್ನುವ ಕಾರಣಕ್ಕಾಗಿ, ಬಂಧನದಲ್ಲಿ ಇರಿಸಿದ ಕಳಂಕವೂ ಅವರಿಗೆ ಅಂಟಿಕೊಂಡಿದೆ. ನ್ಯಾಯಾಂಗೇತರ ‘ವಿಚಾರಣೆ’ ನಡೆಸಿ, ವಿರೋಧಿಗಳ ಹತ್ಯೆ ನಡೆಸುವುದಕ್ಕಾಗಿಯೇ ಅವರು ‘ಟೈಗರ್ ಸ್ಕ್ವಾಡ್’ ಎಂಬ ಸೇನೆಯನ್ನು ಇಟ್ಟುಕೊಂಡಿದ್ದಾರೆ.

ಸೌದಿ ಅರೇಬಿಯಾದ ರಾಜ ಸಲ್ಮಾನ್ ಬಿನ್ ಅಬ್ದುಲ್ ಅಜೀಜ್ ಅಲ್ ಸೌದ್ ಮತ್ತು ಅವರ ಮೂರನೇ ಪತ್ನಿ ಫಾದಾ ಬಿಂಟ್ ಫಾಲ್ಹಾ ಬಿನ್ ಸುಲ್ತಾನ್ ಅವರ ಹಿರಿಯಪುತ್ರ ಈ ಮೊಹಮ್ಮದ್ ಬಿನ್ ಸಲ್ಮಾನ್. ಅವರಿಗೆ ಈಗಷ್ಟೇ 37ರ ಹರೆಯ. ಪ್ರಧಾನ ಮಂತ್ರಿ ಹುದ್ದೆಗೇರುವ ಮುನ್ನ ಹಲವು ಮಹತ್ವದ ಹುದ್ದೆಗಳನ್ನು ನಿಭಾಯಿಸಿದವರು ಅವರು. ಸಲ್ಮಾನ್ ಬಿನ್ ಅಬ್ದುಲ್ ಅಜೀಜ್ ಅಲ್ ಸೌದ್ ಅವರು ಸಿಂಹಾಸನವನ್ನು ಏರಿದ್ದು 2015ರಲ್ಲಿ. ಆಗಿನಿಂದಲೂ ಮೊಹಮ್ಮದ್ ಬಿನ್ ಸಲ್ಮಾನ್ ಅವರದೇ ರಾಜ್ಯಭಾರ. ಜಗತ್ತಿನ ಹಲವು ಶಕ್ತಿವಂಥ ದೇಶಗಳ ಜತೆಗಿನ ರಾಯಭಾರವೂ ಅವರದೇ. ಸಣ್ಣ ವಯಸ್ಸಿನಲ್ಲೇ ದೊಡ್ಡದಾಗಿ ಬೆಳೆದಿರುವ ಈ ಯುವರಾಜ, ಸುಧಾರಣಾ ಕ್ರಮಗಳಿಗೆ ಹೆಸರಾದಷ್ಟೇ ಕ್ರೌರ್ಯಕ್ಕೂ ಕುಖ್ಯಾತಿ ಗಳಿಸಿರುವುದು ವಿಪರ್ಯಾಸದ ವಿದ್ಯಮಾನ. ಆದ್ದರಿಂದಲೇ ಈ ಯುವ ನಾಯಕನನ್ನು ಜಗತ್ತು ‘ಸೌದಿಯ ಸರ್ವಾಧಿಕಾರಿ’ ಎಂದೇ ಗುರ್ತಿಸುತ್ತಿದೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65